

ಡಾ. ಎಸ್. ರಾಮಮೂರ್ತಿ

## ವಾರ ಭವಿಷ್ಯ 25–7–2019 ರಿಂದ 31–7–2019



**ಮೇಷ**

ಮನಸ್ಸು ಹಗುರವಾಗುವುದು. ಶುಭ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ಉದ್ಯೋಗದಲ್ಲಿ ಪ್ರಗತಿ. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರಕುವುದು. ತಕರಾರುಗಳಲ್ಲಿ ನ್ಯಾಯ ಲಭಿಸುವುದು. ಆತ್ಮೀಯರಿಂದ ಸಲಹೆ.

ಶುಭ ದಿನ: 28; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಅಸಮಾಧಾನ. ಶ್ರಮ ಹೆಚ್ಚಾಗುವುದು. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ. ಅಕಾಲ ಭೋಜನ. ಆಪ್ತರ ಆಗಮನ. ಮಕ್ಕಳಿಂದ ಸಹಕಾರ. ಕಾರ್ಯ ಕಲಾಪಗಳಲ್ಲಿ ಯಶಸ್ಸು. ಲೇವಾದೇವಿಗಳಲ್ಲಿ ಸೂಕ್ತಲಾಭ.

ಶುಭ ದಿನ: 29; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಆರಂಭದಲ್ಲಿ ಅನುಕೂಲ. ಆಪ್ತರ ಭೇಟಿ. ಕೆಲಸಗಳಲ್ಲಿ ಯಶಸ್ಸು. ಲೇವಾದೇವಿಗಳಲ್ಲಿ ಲಾಭ ವೃದ್ಧಿ. ವಾರದ ಮಧ್ಯ ಭಾಗದಲ್ಲಿ ಆತಂಕ, ಅನವಶ್ಯಕ ಖರ್ಚು. ಹಿರಿಯರೊಂದಿಗೆ ವಾದ ವಿವಾದ. ವಸ್ತುಗಳು ಕೈಯಿಂದ ಜಾರಿ ಬೀಳುವ ಸಂಭವ.

ಶುಭ ದಿನ: 26; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಮಧ್ಯ ಭಾಗದವರೆಗೂ ಸುಖ ಸೌಖ್ಯ. ನಿರೀಕ್ಷೆಯಂತೆ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ಮಕ್ಕಳು ಸಹಾಯ ಮಾಡುವರು. ಕುಟುಂಬ ಸದಸ್ಯರಿಂದ ಸಹಕಾರ ಲಭಿಸುವುದು. ವಾರಾಂತ್ಯ ಆಲಸ್ಯ. ನಿದ್ರಾಹೀನತೆ. ಅನಾರೋಗ್ಯ.

ಶುಭ ದಿನ: 27; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಸಿಂಹ**

ನಿರೀಕ್ಷೆಯಂತೆ ಕೆಲಸ ನಡೆಯುವುದು. ವ್ಯಾಪಾರ ರಂಗದಲ್ಲಿ ಲಾಭ ವೃದ್ಧಿಯಾಗುವುದು, ಹಿರಿಯರಿಂದ ಸಹಾಯ ಹಾಗೂ ಮಾರ್ಗದರ್ಶನ ಲಭಿಸುವುದು. ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಗಣ್ಯರು ಪ್ರಶಂಸಿಸುವರು.

ಶುಭ ದಿನ: 28; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಆತ್ಮ ವಿಶ್ವಾಸ ಕಡಿಮೆಯಾಗುವುದು. ಕೆಲಸ ಕಾರ್ಯಗಳಲ್ಲಿ ಅಡಚಣೆ. ಲೇವಾದೇವಿಗಳಲ್ಲಿ ಹಿನ್ನಡೆ. ವಿರೋಧಿಗಳಿಂದ ತೊಂದರೆ. ಮಧ್ಯ ಭಾಗದಿಂದ ಅನುಕೂಲ. ವೃತ್ತಿ ಪ್ರವೃತ್ತಿಗಳಲ್ಲಿ ಮುನ್ನಡೆ. ಹಿರಿಯರ ಸಹಾಯ.

ಶುಭ ದಿನ: 29; ಲಕ್ಷ್ಮೀ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಆರಂಭದಲ್ಲಿ ಅನುಕೂಲ. ಶ್ರಮವಿಲ್ಲದೆ ಕಾರ್ಯಸಾಧನೆ. ವ್ಯಾಪಾರದಲ್ಲಿ ಲಾಭ. ಪ್ರೀತಿ ಪಾತ್ರರ ಭೇಟಿ. ಬರಬೇಕಾದ ಹಣ ಬರುವುದು. ವಾರದ ಮಧ್ಯ ಭಾಗದಲ್ಲಿ ಅಧಿಕ ಶ್ರಮ. ಅಕಾಲ ಭೋಜನ. ಹಿರಿಯರಿಂದ ಒತ್ತಡ.

ಶುಭ ದಿನ:26; ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಮಧ್ಯ ಭಾಗದವರೆಗೂ ಅನುಕೂಲ. ಸಮಯಕ್ಕೆ ಸರಿಯಾಗಿ ಬರುವ ಸಂದೇಶಗಳು. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರದಲ್ಲಿ ಲಾಭ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಕುಟುಂಬದಲ್ಲಿ ಶಾಂತ ವಾತಾವರಣ.

ಶುಭ ದಿನ:27; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಧನಸ್ಸು**

ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ವೃತ್ತಿಗಳಲ್ಲಿ ನಿರೀಕ್ಷಿತ ಲಾಭ. ಕುಟುಂಬ ಸದಸ್ಯರಿಂದ ಸಹಕಾರ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಆತ್ಮೀಯರು ಸಲಹೆ ನೀಡುವರು. ಶುಭ ಕಾರ್ಯ ಚಿಂತನೆ.

ಶುಭ ದಿನ: 28; ಗಣೇಶ ಮತ್ತು ದುರ್ಗಾ ಷ್ಟೋತ್ತರ ಪಠಿಸಿ



**ಮಕರ**

ವಾರದ ಆರಂಭದಲ್ಲಿ ಕೆಲಸದಲ್ಲಿ ಹಿನ್ನಡೆ. ಅನಾರೋಗ್ಯ. ಅಹಿತ ಭೋಜನ. ಲೇವಾದೇವಿಗಳಲ್ಲಿ ಏನಾದರೊಂದು ಸಮಸ್ಯೆ. ವಾರದ ಮಧ್ಯ ಭಾಗದಿಂದ ಸಮಾಧಾನ. ಮನೋಬಲ ಹೆಚ್ಚುವುದು. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ.

ಶುಭ ದಿನ:29; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಆರಂಭದಲ್ಲಿ ಸಂತಸ. ಶ್ರಮವಿಲ್ಲದೆ ಕಾರ್ಯಸಿದ್ಧಿ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಸಂದೇಶಗಳಿಂದ ಧೈರ್ಯ. ವಾರದ ಮಧ್ಯ ಭಾಗದಲ್ಲಿ ಆತಂಕ. ಹಿರಿಯರ ಮೇಲೆ ಸಿಟ್ಟು. ಆರೋಗ್ಯ ವ್ಯತ್ಯಯ. ಉದ್ಯೋಗ ವೃತ್ತಿಗಳಲ್ಲಿ ಸಮಸ್ಯೆ.

ಶುಭ ದಿನ:26; ಗಣೇಶ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಮಧ್ಯ ಭಾಗದವರೆಗೂ ಅನುಕೂಲ, ಅಭಿವೃದ್ಧಿ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಲಾಭ. ಮಕ್ಕಳು ಸಹಕಾರ ನೀಡುವರು. ಆಟ ಪಾಠಗಳಲ್ಲಿ ಮೇಲುಗೈ. ವಾಹನ ಯಂತ್ರೋಪಕರಣಗಳು ಅಡೆತಡೆಯಿಲ್ಲದೆ ನಡೆಯುವುದು.

ಶುಭ ದಿನ: 27; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ

